ಇಂದು ದಿನಾಂಕಃ 03.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿಯ ಪರ ಶ್ರೀ ಜಿ ವಿ ಕೆ ವಕೀಲರಿಂದಃ

ಸರ್ವೆನಂ.351/2 ವಾದಿಯ ಆಸ್ತಿ ಎಂದರೆ ಸರಿ. ವಾದಿ ತನ್ನ ಹಸ್ತ ನಕ್ಷೆಯಲ್ಲಿ ನಮೂದಿಸಿರುವ X Y ರೇಖೆ ಕಾಲು ದಾರಿಯಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯರು ಹಾಜರಪಡಿಸಿರುವಂತಂತಹ ಹಸ್ತ ನಕ್ಷೆಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಹಸ್ತ ನಕ್ಷೆಯಲ್ಲಿ ತೋರಿಸಿರುವ X Y ರೇಖೆ ಕಾಲು ದಾರಿಯಾಗಿರುತ್ತದೆ ಎಂದರೆ ಸರಿ. ಸದರಿ ಕಾಲು ದಾರಿ 8.3 ಅಡಿಯನ್ನು ಹೊರತುಪಡಿಸಿ ಹೆಚ್ಚಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

2. ಅನಿಲ್ ಎಸ್ ಪಾಟೀಲ ರವರು ನನ್ನ ಚಿಕ್ಕಪ್ಪನ ಮಗ ಆಗಬೇಕು. ಸದರಿ ಅನಿಲ್ ರವರು ಮಾಹಿತಿ ಹಕ್ಕಿನ ಅಡಿಯಲ್ಲಿ ಪಡೆದುಕೊಂಡಂತಹ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಇರಬಹದು ಎಂದು ನಡಿದಿರುತ್ತಾರೆ. ನಾನು ಹೇಳುತ್ತಿರುವ 16 ಫೂಟ್ ಜಾಗ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆ ರೀತಿ 16 ಫೂಟ್ ಅಸ್ತಿತ್ವ ಇರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ.

3. ಹಿರೇಕೆರೂರ-ಮಾಸೂರು ಮುಖ್ಯ ರಸ್ತೆಯಿಂದ ಹೊಸಳ್ಳಿ ರಸ್ತೆಗೆ, ರಸ್ತೆಯನ್ನು ಮಾಡುವಂತೆ ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಅದರ ಬಾಧ್ಯತೆಯನ್ನು ನಾನೇ ವಹಿಸಿದ್ದೆ ಎಂದರೆ ಸಾಕ್ಷಿಯು ನಾನು ನನ್ನ ಕುಟುಂಬದ ಕಡೆಯಿಂದ ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ X Y ದಾರಿ ರೈತರು ಬೇಸಾಯಕ್ಕೆ ಬೇಕಾಗಿರುವಂತಹ ಸಲಕರಣೆಗಳನ್ನು ತೆಗೆದುಕೊಂಡು ಹೋಗುವ ರಸ್ತೆ ಎಂದರೆ ಸರಿ. ಸದರಿ ರಸ್ತೆ ಕಾಲು ದಾರಿಯಾಗಿದ್ದು, ಸದರಿ ದಾರಿಯಲ್ಲಿ ಬಂಡಿ, ಟ್ರಾಕ್ಟರ್ ನ್ನು ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ ಎಂದರೆ ಸಾಕ್ಷಿಯು 1960 ರಿಂದು ನಾವು ನಮ್ಮ ಕುಟುಂಬದ ಜಮೀನುಗಳಿಗೆ ಟ್ರಾಕ್ಟರ್, ಬಂಡಿ ಇತರೆ ಸಲಕರಣೆಗಳನ್ನು ಸದರಿ ದಾರಿಯಲ್ಲಿಯೇ ತೆಗೆದುಕೊಂಡು ಹೋಗುತ್ತಿದ್ದೆವು ಎಂದು ನುಡಿದಿರುತ್ತಾರೆ. ಸದರಿ ದಾರಿಯನ್ನು ನಾವು ಅಗಲೀಕರಿಸಲು ಹೋಗಿ ವಾದಿಯರ ಜಾಗವನ್ನು ಒತ್ತುವರಿ ಮಾಡಿದ ಕಾರಣದಿಂದ ವಾದಿ ಈ ದಾವೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ನನ್ನ ಸಾಕ್ಷ್ಯಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ನಾನು ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ನಾನು ನಮ್ಮ ಜಮೀನುಗಳಿಗೆ ಹೋಗಿ ಬರುವ ರಸ್ತೆಯ ಅಗಲ 30 ಅಡಿ ಇದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನಾವು ವಿವಾದಿತ ಜಾಗದಲ್ಲಿ ರಸ್ತೆ ಮಾಡುವಾಗ ವಾದಿಯರು ತಕರಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾವಲ್ಲ ಜಿಲ್ಲಾ

ಪಂಚಾಯತಿಯವರು ಮಾಡುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಜಿಲ್ಲಾ ಪಂಚಾಯತಿಯವರು ನನ್ನ ಉತ್ತೇಜನೆಯ ಮೇರೆಗೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

5. 2023 ರಲ್ಲಿ ಕಾಲು ದಾರಿಯನ್ನು ಅಳತೆ ಮಾಡಿ ಎಂದು ನಾನು ಸರ್ವೆ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಂತರ ಸದರಿ ಅರ್ಜಿಗೆ ಸರ್ವೆ ಇಲಾಖೆಯವರು ವಿವಾದಿತ ದಾರಿ 8.3 ಫೂಟ್ ಇದೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈ ಘಟನೆಯ ಸಲುವಾಗಿ ವಾದಿಯ ಗಂಡ ಆತ್ಮ ಹತ್ಯೆ ಮಾಡಿಕೊಂಡು ತೀರಿಕೊಂಡಿರುತ್ತಾರೆ ಎಂದರೆ ಇರಬಹುದು ಎಂದು ನುಡಿದಿರುತ್ತಾರೆ. ಆಗ ಪ್ರಕರಣವು ದಾಖಾಗಿದ್ದು ಸದರಿ ಪ್ರಕರಣದಲ್ಲಿ ನಾನು ಕೂಡ ಒಬ್ಬ ಆರೋಪಿಯಾಗಿದ್ದೆ ಎಂದರೆ ಸಾಕ್ಷಿಯು ಸುಳ್ಳಾಗಿ ಪ್ರಕರಣವನ್ನು ದಾಖಲಾಗಿಸಿತ್ತು ಎಂದು ನುಡಿದಿರುತ್ತಾರೆ. ಸದರಿ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನನ್ನು ನಾನು ಪಡೆದುಕೊಂಡಿದ್ದೆ ಎಂದರೆ ಸರಿ. ನಾನು ಹೇಳುವಂತೆ ಯಾವುದೇ ರಸ್ತೆ ಇಲ್ಲದಿದ್ದರೂ ಕೂಡ ನಮ್ಮ ಜಮೀನುಗಳಿಗೆ ಓಡಾಡಲು ಅನೂಕೂಲ ಮಾಡಿಕೊಡುವ ಸಲುವಾಗಿ 8.3 ಫೂಟ್ ಇರುವಂತಹ ರಸ್ತೆಯನ್ನು 16 ಫೂಟ್ ರಸ್ತೆ ಇದೆ ಎಂದು ಹೇಳಿ ಸುಳ್ಳಾಗಿ ಸಾಧಿಸಿಕೊಂಡು ರಸ್ತೆಯನ್ನು ಅನಾವಶ್ಯಕವಾಗಿ ಅಗಲೀಕರಣ ಮಾಡಲು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.